ಡಿ.ಡಬ್ಲ್ಯೂ.-1

ದಿನಾಂಕಃ **06.05.2025** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ದೂರುದಾರರ ಪರ ಶ್ರೀ ಎಮ್.ಆರ್.ಎಚ್ ವಕೀಲರಿಂದಃ**

ಹುಣಸೂರು ತಾಲ್ಲೂಕು ಕಟ್ಟೆಮಳಲವಾಡಿ ಗ್ರಾಮದ ಸಿದ್ದಲಿಂಗನಾಯಕರವರ ಮಗ ಪರಮೇಶ ನೀವೇ ಎಂದರೆ ಸಾಕ್ಷಿ ನಾನು ಪರಮೇಶ ಎಂದು ನುಡಿಯುತ್ತಾರೆ. ಫಿರ್ಯಾದುದಾರರು ದಿಃ19.10.2017 ರಂದು ಸದರಿ ವಿಳಾಸಕ್ಕೆ ನೋಟೀಸ್ ನೀಡಿದ್ದರು ಎಂದರೆ ಸರಿ. ಸದರಿ ನೋಟೀಸ್ ನ್ನು ಸಹಿ ಮಾಡಿ ಪಡೆದುಕೊಂಡಿರುತ್ತೀಯಾ ಎಂದರೆ ಸಾಕ್ಷಿ ನನಗೆ ಸರಿಯಾಗಿ ನೆನಪಿಲ್ಲ ನೋಟೀಸ್ ಪಡೆದುಕೊಂಡಿದ್ದೇನೆ. ಎಷ್ಟು ರೀತಿಯ ಸಹಿ ಮಾಡುತ್ತೀಯಾ ಎಂದರೆ ನಾನು ಇಂಗ್ಲೀಷನಲ್ಲಿ ಸಹಿ ಮಾಡುತ್ತೇನೆ ಎಂದು ನುಡಿದಿರುತ್ತಾರೆ. ಎಷ್ಟು ರೀತಿಯ ಸಹಿ ಮಾಡುತ್ತೀಯಾ ಎಂದರೆ ನಾನು ಒಂದೊಂದು ಬಾರಿ ಒಂದೊಂದು ತರಹ ಸಹಿ ಮಾಡುತ್ತೇನೆ ಎಂದು ನುಡಿದಿರುತ್ತಾರೆ. ಫಿರ್ಯಾದುದಾರರು ನಿಪಿ-4 ನೀಡಿದ ನೋಟೀಸ್ ನ್ನು ತೆಗೆದುಕೊಂಡು ನಿಮ್ಮ ವಕೀಲರಿಗೆ ನೀಡಿದ್ದೀರಾ ಎಂದರೆ ಸಾಕ್ಷಿ ನೀಡಿದ್ದೇನೆ ಎಂದು ನುಡಿದಿರುತ್ತಾರೆ. ಅದಕ್ಕೆ ಪ್ರತ್ಯುತ್ತರವನ್ನು ನೀಡಿರುತ್ತೇನೆಂದರೆ ಸರಿ. ಸದರಿ ಪ್ರತ್ಯುತ್ತರ ನಿಡಿ-1 ಎಂದು ನಿಶಾನೆಗೊಂಡಿರುತ್ತದೆ. ನಿಡಿ-1 ರಲ್ಲಿ ನನ್ನ ಹೆಸರು ಪರಮೇಶನಾಯಕ ಎಂದು ನಮೂದಾಗಿರುತ್ತದೆ. ಸದರಿ ನಿಡಿ-1 ರಲ್ಲಿ ನಾನು ಪರಮೇಶ ಅಲ್ಲ ಪರಮೇಶನಾಯಕನೇ ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಈ ಪ್ರಕರಣದ ಸಮನ್ಸ ಪರಮೇಶ ಎಂಬ ಹೆಸರಿಗೆ ಜಾರಿಯಾಗಿದೆ ಎಂದರೆ ಸರಿ. ಸದರಿ ಸಮನ್ಸ್ ಆಧಾರದ ಮೇಲೆ ನನ್ನ ವಕೀಲರಿಗೆ ನೀಡಿದ್ದೇನೆಂದರೆ ಸರಿ. ಈ ಪ್ರಕರಣದ ವಕಾಲತ್ ನಾಮದಲ್ಲಿ ಸಹಿ ಮಾಡಿರುತ್ತೇನೆ. ಸದರಿ ವಕಲಾತ್ ನಾಮದಲ್ಲಿ ಪರಮೇಶ ಎಂದು ಹೇಳಿದ್ದೀರಾ ಅಥವಾ ಪರಮೇಶನಾಯಕ ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ಪರಮೇಶ ಎಂದು ಹೇಳಿದ್ದೇನೆಂದು ನುಡಿಯುತ್ತಾರೆ. ಸಾಕ್ಷಿಗೆ ವಕಲಾತ್ ನಾಮವನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಸಾಕ್ಷಿ ಒಪ್ಪಿದ್ದು ಈಗ ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಡಿ-2 ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಸಾಕ್ಷಿ ಒಪ್ಪಿದ್ದು ಈಗ ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ನನ್ನ

ಹೆಸರು ಪರಮೇಶನಾಯಕ ಎಂದು ಹೇಳಲು ದಾಖಲೆಯನ್ನು ನೀಡಿದ್ದೀರಾ ಎಂದರೆ ಸಾಕ್ಷಿ ನೀಡಿದ್ದೇನೆ. ಸದರಿ ದಾಖಲೆಗಳು ಯಾವುದು ಎಂದರೆ ಸಾಕ್ಷಿ ಬ್ಯಾಂಕ್ ಖಾತೆ, ಆಧಾರ ಕಾರ್ಡ ಮತ್ತು ರೇಶನ್ ಕಾರ್ಡ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ ಸಾಕ್ಷಿಗೆ ನಿಮ್ಮ ಸಹಿ ಎಲ್ಲಿದೆ ಎಂದು ಕೇಳಲಾಗಿ ಸಾಕ್ಷಿ ಅದರಲ್ಲಿ ನನ್ನ ಸಹಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ತನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತೋರಿಸಲಾಗಿ ಅದರಲ್ಲಿ ನಿಮ್ಮ ಸಹಿ ಇದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಈ ಹಿಂದೆ ದಿಃ22.02.2025 ರಂದು ನನ್ನ ಪರವಾಗಿ ನಾನು ಸಾಕ್ಷಿ ವಿಚಾರಣೆ ನೀಡಿದ್ದೇನೆಂದರೆ ಸರಿ. ಸದರಿ ಸಮಯದಲ್ಲಿ ನನ್ನ ಹೆಸರು ಪರಮೇಶನಾಯಕ ಎಂದು ಹೇಳಿರುತ್ತೇನೆ. ಸದರಿ ವಿಷಯವಾಗಿ ದಾಖಲೆಗಳನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿ ನೀಡಿದ್ದೇನೆಂದು ನುಡಿಯುತ್ತಾರೆ. ಈ ಹಿಂದೆ ನಾನು ನನ್ನ ಪರವಾಗಿ ಸಾಕ್ಷಿಯನ್ನು ನುಡಿಯುದಿದ್ದು, ಸದರಿ ವಿಚಾರವನ್ನು ನಿಡಿ-1 ರಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ದಿಃ22.02.2025 ರಂದು ನುಡಿದಿರುವ ಮುಖ್ಯ ವಿಚಾರಣೆಯ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನಿಡಿ-1 ಮತ್ತು ದಿಃ22.02.2025 ರಲ್ಲಿ ನುಡಿದಿರುವ ವಿಚಾರಗಳು ಒಂದಕ್ಕೊಂದು ತಾಳೆ ಇಲ್ಲ ಎಂದರೆ ಸಾಕ್ಷಿ ಆ ರೀತಿ ಇಲ್ಲ ಎಂದು ನುಡಿಯುತ್ತಾರೆ. ಫಿರ್ಯಾದುದಾರರು ಯಾವ ಉದ್ದೇಶಕ್ಕಾಗಿ ಈ ಪ್ರಕರಣವನ್ನು ಹೂಡಿದ್ದಾರೆಂದು ತಿಳಿದುಕೊಂಡಿದ್ದೀಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಫಿರ್ಯಾದುದಾರರ ಸುಳ್ಳು ದಾಖಲೆಗಳ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದಾರೆಂದು ದೂರನ್ನು ನೀಡಿದ್ದೀರಾ ಎಂದರೆ ಸಾಕ್ಷಿ ನೀಡಿಲ್ಲ ಎಂದು ನುಡಿಯುತ್ತಾರೆ. ನಾನು ಹುಟ್ಟಿನಿಂದಲು ಕಟ್ಟೆಮಳಲವಾಡಿ ಗ್ರಾಮದಲ್ಲಿ ವಾಸಿಸುತ್ತಿದ್ದೇನೆ. ನಾನು ಕೂಲಿ ಕೆಲಸ ಮಾಡುತ್ತೇನೆ. ಫಿರ್ಯಾದುದಾರರ ದಿಃ09.01.2016 ರಂದು ಕೈ ಸಾಲವಾಗಿ ರೂ.5,00,000/- ರೂ.ಗಳನ್ನು ನೀಡಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ಸಾಕ್ಷಿಗೆ ನಿಪಿ-7 ನ್ನು ತೋರಿಸಲಾಗಿ ಅದರಲ್ಲಿ ನಿಮ್ಮ ಸಹಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿದಾರರಾದ ಸತೀಶ ಮತ್ತು ಪ್ರಭಾಕರವರಿಗೆ ನಿಮ್ಮ ಮೇಲೆ ವೈಮನಸ್ಸು ಏನಾದರೂ ಇದೆಯಾ ಎಂದರೆ ಸಾಕ್ಷಿ ಅವರು ಯಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿಃ09.01.2016 ರಂದು ಇಬ್ಬರು ಸಾಕ್ಷಿಗಳ ಸಮಕ್ಷಮ ರೂ.5,00,000/- ರೂಗಳನ್ನು

ಸಾಲವಾಗಿ ಪಡೆದುಕೊಳ್ಳುವಾಗ ಆನಂದ ಎಂಬ ವಕೀಲರು ನಿಪಿ-7 ನ್ನು ತಯಾರಿಸಿ ನಿಮ್ಮ ಸಹಿಯನ್ನು ಪಡೆದು ಹಣವನ್ನು ನೀಡಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಪಡೆದುಕೊಂಡ ಹಣವನ್ನು ಎಳನೀರು ವ್ಯಾಪಾರಕ್ಕಾಗಿ ಉಪಯೋಗಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಹಣಕ್ಕೆ 2% ಬಡ್ಡಿಯನ್ನು ನೀಡುತ್ತೇನೆಂದು ಒಪ್ಪಿಕೊಂಡಿರುತ್ತೇನೆಂದರೆ ಸರಿಯಲ್ಲ. ಸಾಲವಾಗಿ ನೀಡಿರುವ ಹಣವನ್ನು ಹಿಂದುರುಗಿಸಿ ನೀಡು ಎಂದು ಸಾಕಷ್ಟು ಬಾರಿ ನಿಮ್ಮನ್ನು ಕೇಳಿಕೊಂಡಿರುತ್ತಾರೆಂದರೆ ಸರಿಯಲ್ಲ.

ದಿಃ20.09.2017 ರಂದು ನನಗೆ ಸಂಬಂಧಿಸಿದ ನಿಪಿ-1 ಕ್ಕೆ ಸಹಿ ಮಾಡಿ ಪಿರ್ಯಾದುದಾರರಿಗೆ ನೀಡಿರುತ್ತೀರಾ ಎಂದರೆ ಸರಿಯಲ್ಲ. ನಿಪಿ-1 ನ್ನು ಸಾಲವಾಗಿ ನೀಡಿದ ಹಣವನ್ನು ಹಿಂದುರುಗಿಸಲು ನೀಡಿದ್ದೀರಾ ಎಂದರೆ ಸರಿಯಲ್ಲ. ನಿಪಿ-1 ಕ್ಕೆ ಪರಮೇಶ ಎಂದು ಆಂಗ್ಲ ಭಾಷೆಯಲ್ಲಿ ಸಹಿ ಮಾಡಿ ನೀಡಿರುತ್ತೀರಿ ಎಂದರೆ ಸರಿಯಲ್ಲ. ದಿಃ20.09.2017 ರಂದು ಪಿರ್ಯಾದುದಾರರು ಸದರಿ ನಿಪಿ-1 ನ್ನು ನಗದೀಕರಣಕ್ಕಾಗಿ ಹಾಜರುಪಡಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನಿಪಿ-1 ನ್ನು ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಹಿಂಬರಹವನ್ನು ಪಿರ್ಯಾದುದಾರರಿಗೆ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಹಿಂಬರಹ ಬಂದ ನಂತರ ದಿಃ19.10.2017 ರಂದು ವಕೀಲರ ಮೂಲಕ ಲೀಗಲ್ ನೋಟೀಸ್ ನ್ನು ನೀಡಿರುತ್ತಾರೆಂದರೆ ಸರಿ. ಸಾಕ್ಷಿಗೆ ನಿಪಿ-6 ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಸಾಕ್ಷಿ ಒಪ್ಪಿದ್ದು ಈಗ ಅದನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ನಿಪಿ-9 ರಲ್ಲಿ ಮತ್ತು ನಿಪಿ-6(ಎ) ರಲ್ಲೂ ಪರಮೇಶ ನಾಯಕ ಎಂದು ಸಹಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಒಂದೊಂದು ಬಾರಿ ಒಂದೊಂದು ತರಹ ಸಹಿ ಮಾಡುತ್ತೇನೆಂದು ನುಡಿಯುತ್ತಾರೆ. ನಿಪಿ-7 ರಲ್ಲಿರುವ ಸಹಿ ನನ್ನದಲ್ಲ ಎಂದು ನಾನು ನುಡಿದಿದ್ದು, ಅದರಲ್ಲಿ ಪರಮೇಶ ಎಂದು ಸಹಿ ಇದೆ. ಪರಮೇಶನಾಯಕ ಎಂದು ಇರುವುದಿಲ್ಲ ಎಂದರೆ ಸರಿ. ನಿಪಿ-1 ರಲ್ಲಿರುವ ಸಹಿ ನನ್ನದಲ್ಲ ಎಂದು ನಾನು ನುಡಿದಿದ್ದು, ಅದರಲ್ಲಿ ಪರಮೇಶ ಎಂದು ಸಹಿ ಇದೆ. ಪರಮೇಶನಾಯಕ ಎಂದು ಇರುವುದಿಲ್ಲ ಎಂದರೆ ಸರಿ. ನಿಪಿ-9, ನಿಪಿ-7, ಮತ್ತು ನಿಪಿ-1 ರಲ್ಲಿರುವ ಸಹಿಗಳನ್ನು ನನ್ನದು ಎಂದರೆ ಸಾಕ್ಷಿ ನಿಪಿ-1 ಮತ್ತು 7 ರಲ್ಲಿರುವ ನನ್ನದಲ್ಲ ನಿಪಿ-9 ರಲ್ಲಿರುವ ಸಹಿ ನನ್ನದು ಎಂದು ನುಡಿಯುತ್ತಾರೆ.

ಅನ್ಯತ ಫಾಯಿದೆ ಹೊಂದಲು ನಿಪಿ-1 ಮತ್ತು 7 ರಲ್ಲಿರಮ ಸಹಿ ನನ್ನದಲ್ಲ ಎಂದು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-9 ರಲ್ಲಿರುವ ಸಹಿ ಬಿಟ್ಟು ಬೇರೆ ಯಾವುದಾದರೂ ದಾಖಲೆಗಳ ಮೇಲೆ ಸಹಿ ಮಾಡಿದ್ದೀರಾ ಎಂದರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ 311 ಅರ್ಜಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಸಾಕ್ಷಿ ಒಪ್ಪಿದ್ದು ಈಗ ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ನಿಪಿ-11 ರಲ್ಲಿ ಪರಮೇಶ ಎಂದು ಸಹಿ ಇದೆ ಪರಮೇಶ ನಾಯಕ ಎಂದು ಇಲ್ಲ ಎಂದರೆ ಸರಿ. ಸಾಕ್ಷಿಗೆ 70(2) ಅರ್ಜಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಸಾಕ್ಷಿ ಒಪ್ಪಿದ್ದು ಈಗ ಅದನ್ನು ನಿಪಿ-12 ಎಂದು ಗುರುತಿಸಲಾಯಿತು. ನಿಪಿ-12 ರಲ್ಲಿ ಪರಮೇಶ ಎಂದು ಸಹಿ ಇದೆ ಪರಮೇಶ ನಾಯಕ ಎಂದು ಇಲ್ಲ ಎಂದರೆ ಸರಿ. ಸಾಕ್ಷಿಗೆ ಮತ್ತೊಂದು 311 ಅರ್ಜಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಸಾಕ್ಷಿ ಒಪ್ಪಿದ್ದು ಈಗ ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ನಿಪಿ-13 ರಲ್ಲಿ ಪರಮೇಶ ಎಂದು ಸಹಿ ಇದೆ ಪರಮೇಶ ನಾಯಕ ಎಂದು ಇಲ್ಲ ಎಂದರೆ ಸರಿ. ನಿಡಿ-2 ರಲ್ಲಿ ಪರಮೇಶ ನಾಯಕ ಎಂದು ಸಹಿ ಮಾಡಿ ಅದನ್ನು ಐ.ಓ.ಬಿ ಕಟ್ಟೆಮಳಲವಾಡಿ ಗ್ರಾಮದ ಬ್ಯಾಂಕಿಗೆ ನೀಡಿದ್ದೇನೆ. ಪರಮೇಶ ನಾಯಕ ಎಂಬ ಹೆಸರಿನಲ್ಲಿ ಬ್ಯಾಂಕ್ ಖಾತೆ ಇರುವುದಿಲ್ಲ ಮತ್ತು ಚೆಕ್ ಪುಸ್ತಕವನ್ನು ವಿತರಿಸಿರುವುದಿಲ್ಲ ಎಂದು ಹಿಂಬರಹವನ್ನು ನೀಡಿರುತ್ತಾರೆಂದರೆ ಸರಿ. ಒಂದು ವೇಳೆ ನಾನು ಪರಮೇಶ ಎಂದು ಸಹಿ ಮಾಡಿ ಕೊಟ್ಟಿದ್ದರೆ ಈ ರೀತಿ ಹಿಂಬರಹ ಬರಲು ಸಾದ್ಯವಿಲ್ಲ ಎಂದರೆ ಸರಿ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು